ವಾಚ್ಯವಾಗಿ ಹೇಳುತ್ತಾ ಅದಿತಿ ಮಿತ್ತಲ್ ಸ್ಟ್ಯಾಂಡ್‌ಅಪ್ ಕಾಮಿಡಿ ಮಾಡಿದ್ದಾರೆ. ಅದರಲ್ಲೇ ಅವರು ಕೆಲವು ಗಂಡಸರು ನೂಕುನುಗ್ಗಲಲ್ಲಿ ಹೇಗೆಲ್ಲ ತಮ್ಮ ಕುಚಗಳಿಗೆ ತೊಂದರೆ ನೀಡುತ್ತಾರೆ ಎನ್ನುವುದನ್ನೂ ಹೇಳಿಕೊಂಡಿದ್ದಾರೆ.

ಪೋಲಿತನ, ತುಂಟತನದ ಪರಿಧಿಯಿಂದ ಇನ್ನೂ ಒಂದು ಹಂತ ಮೇಲೇರಿದ ಭಾವಪ್ರದರ್ಶನಗಳಿವು. ಇಂತಹ ಸಣ್ಣಪುಟ್ಟ ಮಾದರಿಗಳನ್ನು ನೋಡಿಯೇ ಬೆಳೆದವರು ನಾವು. 'ಅಂಜದಗಂಡು' ಸಿನಿಮಾದಲ್ಲಿ ರವಿಚಂದ್ರನ್ ಪ್ಯಾಂಟಿನ ಜಿಪ್ ಬಿಚ್ಚಿ ನಾಯಕಿಯನ್ನು ಹೆದರಿಸಿದ್ದು ನೆನಪಿದೆಯೇ? ಜಗ್ಗೇಶ್ ಅವರನ್ನು ನಾಯಕನನ್ನಾಗಿಸಿದ ಸಿನಿಮಾ ಮೂಲಕ ನಿರ್ದೇಶಕರ ಟೋಪಿ ತೊಟ್ಟ ಉಪೇಂದ್ರ ಕೊಟ್ಟ ಮಾತುಗಳ 'ಶಾಕ್' ಮರೆಯಲಾದೀತೆ? ನಾಯಕಿಯ ಕಣ್ಣಲ್ಲಿ ಕಣ್ಣಿಟ್ಟು, 'ಇಬ್ಬರೂ ಈಗ ಲವ್ ಮಾಡೋಣ... ಮಾಡು' ಎಂದಿದ್ದೂ ಅವರೇ ಅಲ್ಲವೇ? ಅದಿರಲಿ, 'ಬಗ್ಗಿದರೆ ಬಾಯಿಗೆ ಬಡಿಯುತ್ತೆ... ಎದ್ದರೆ ಎದೆಗೆ ಬಡಿಯುತ್ತೆ... ಈ ಒಗಟನ್ನು ಬಿಡಿಸು' ಎಂದು ಉಮಾಶ್ರೀ ತುಂಟನೋಟ, ಮಾದಕ ದನಿಯಲ್ಲಿ ಸಿಹಿಕಹಿ ಚಂದ್ರು ಅವರನ್ನು ಕೇಳಿದ 'ಚಾಲೆಂಜ್ ಗೋಪಾಲಕೃಷ್ಣ' ಸಿನಿಮಾದ ದೃಶ್ಯ ಈಗಲೂ ಟಿ.ವಿ.ಯಲ್ಲಿ ಆಗೀಗ ಇಣುಕುತ್ತದೆ. ಆರ್.ಎನ್. ಜಯಗೋಪಾಲ್ ಅವರೇ ಇಂತಹ ಪರಮ ಪೋಲಿ ಸಾಲುಗಳನ್ನು 1990ರ ದಶಕದ ಪ್ರಾರಂಭದಲ್ಲಿ ಬರೆದಿದ್ದರು. 'ಎದುರುಮನೆ ಗಂಡ ಪಕ್ಕದ್ಮನೆ ಹೆಂಡ್ತಿ' ಸಿನಿಮಾದಲ್ಲಿ ತುರುವೇಕೆರೆ ನೇತ್ರಪ್ಪ ಪಾತ್ರಧಾರಿಯಾದ ಮುಖ್ಯಮಂತ್ರಿ ಚಂದ್ರು, ಅವರ ಪತ್ನಿ ಕನಕವೇಣಿಯಾಗಿ ಉಮಾಶ್ರೀ, ಅವರಿಗೆ ಮೂಡ್ ಬಂದಾಗಲೆಲ್ಲ ಕಾದಂಬರಿಯ ಸಾಲುಗಳನ್ನು ಬರೆದುಕೊಳ್ಳುವ ಮೈಸೂರು ಲೋಕೇಶ್ ಕೊಟ್ಟಿದ್ದ ಪೋಲಿ ಜೋಕುಗಳ ಕಚಗುಳಿ ದೃಶ್ಯಗಳು ಸ್ಮೃತಿಪಟಲದಲ್ಲಿ ಈಗಲೂ ಉಳಿದಿವೆ. ಆದರೆ, ಆಗ ಡಬ್ಬಲ್ ಮೀನಿಂಗ್ ಎಂದು ಕರೆಸಿಕೊಳ್ಳುತ್ತಿದ್ದ ಮಾತುಗಳು ಈಗ ಹಳೆಯ ಪ್ರಭೇದಕ್ಕೆ ಸೇರಿಬಿಟ್ಟಿವೆ. ನೇರಾರ್ಥದ ಕಾಲವಿದು. ದಿಟ್ಟ ನುಡಿಗಟ್ಟುಗಳ ಭಾವಾನುವಾದದ ಕಾಲ. ರಿಯಾಲಿಟಿ ಶೋಗಳಲ್ಲಿ ಪ್ರದರ್ಶಿತವಾಗುವ ಸ್ಕಿಟ್ ಗಳೂ ಆಗೀಗ 'ಬಿಲೋ ದಿ ಬೆಲ್ಟ್' ಎಂದು ಹಿರಿಯರು ಜರೆಯುವ ಜಾಯಮಾನಕ್ಕೆ ಪಕ್ಕಾಗುತ್ತವೆ.

ಖಾಸಗಿ ಗುಂಪುಗಳಲ್ಲಿ ಕೇಳುತ್ತಿದ್ದ ಪರಮ ಪೋಲಿ ಸರಕು ಈ ಹೊತ್ತಿನಲ್ಲಿ ಮನರಂಜನೆಯ ಮೊಗಸಾಲೆಯಲ್ಲಿ ಅನುರಣಿಸುತ್ತಿರುವುದು ಯಾಕೆ ಎನ್ನುವ ಪ್ರಶ್ನೆ ಕಾಡುತ್ತದೆ. 'ಇದು ಗ್ಲೋಬಲ್ ಸ್ಟ್ಯಾಂಡ್ ಅಪ್ ಮಾರುಕಟ್ಟೆಯ ನಕಲು' ಎಂದು ಅಂಕಲ್ ಸೀರೀಸ್ ಹಾಗೂ ಮ್ಯಾನೇಜರ್ ಸೀರೀಸ್ ವಿಡಿಯೊಗಳನ್ನು ಮಾಡಿ, ಅನೇಕ ನೋಡುಗರ ಕಣ್ಣುಕೀಲಿಸಿಕೊಂಡ ಪುನೀತ್ ಬಿ.ಎ. ಗುರುತಿಸುತ್ತಾರೆ. 'ಬೆಂಗಳೂರಿನ ನಗರ ಸಂವೇದನೆಯಲ್ಲಿ ಅನೇಕರು 'ಎಫ್ ವರ್ಡ್', 'ಬಿ ವರ್ಡ್' ಅನ್ನು ಅನೂಚಾನವಾಗಿ ಬಳಸುತ್ತಿರುವುದರಿಂದ, ಈ ರೀತಿಯ ನುಡಿಗಟ್ಟುಗಳು ಅವರಿಗೆ ಸಹಜವೇ ಆಗಿವೆ. ನನಗೆ ಇಂತಹ ಪದಗಳನ್ನು ಬಳಸುವುದು



ಹಾಸ್ಯದ ಹಲವು ಮಗ್ಗುಲುಗಳ ಶೋಧದಲ್ಲಿ ಪುನೀತ್ ಬಿ.ಎ.

# ತಾತ್ಕಾಲಿಕ ಫ್ಯಾಂಟಸಿ

**-ಡಾ. ಪ್ರೀತಿ ಶಾನಭಾಗ್**
ಮನೋವೈದ್ಯೆ

ಮನುಷ್ಯ ಮನರಂಜನೆಯನ್ನು ಬಯಸುತ್ತಾನೆ. ಸಿನಿಮಾದಲ್ಲಂತೂ ಇದು ಸಹಜ. ಇದ್ದಕ್ಕಿದ್ದಂತೆ ಡಾನ್ಸ್ ಮಾಡ್ತಾರೆ. ಒಂದೇ ರೀತಿ ನೂರು ಜನ ಏಕಕಾಲಕ್ಕೆ ಕುಣಿಯುವುದು ಸಾಧ್ಯವಿಲ್ಲ ಎನ್ನುವುದು ಗೊತ್ತಿದ್ದೂ ಅದು ನಮಗೆಲ್ಲ ರಂಜನೆಯೇ. ವಾಸ್ತವ ಜಗತ್ತಿನಿಂದ ಹೊರಬಂದು, ಮನಸ್ಸು ಇಂತಹ ಫ್ಯಾಂಟಸಿಯನ್ನು ನಂಬುತ್ತದೆ.

ವಾಸ್ತವವಾದದಿಂದ ಹೊರಬಂದು ಡ್ರಾಮಾ, ರಿಯಾಲಿಟಿ ಶೋಗಳನ್ನು ಸೃಜಿಸುವವರೇ ಹೆಚ್ಚು. ಸೃಜನಶೀಲತೆಯ ಮಟ್ಟಕ್ಕೆ ತಕ್ಕಂತೆ ಶ್ರೋತೃಗಳು, ವೀಕ್ಷಕರನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಇಂತಹ ಮನರಂಜನೆಯ ವಸ್ತುಗಳು ತಯಾರಾಗುತ್ತವೆ. ಪ್ರೈಮ್‌ಟೈಮ್‌ನಲ್ಲಿ ಕಾರ್ಯಕ್ರಮ ನೋಡುವವರು, ಸ್ಟ್ಯಾಂಡ್‌ಅಪ್ ಕಾಮಿಡಿ ಮಾಡುವವರು, ಅಂತಹ ಜೋಕುಗಳನ್ನು ನೋಡುವವರು ಇವರೆಲ್ಲರ ಮನಸ್ಥಿತಿ ಮುಖ್ಯವೆನಿಸುತ್ತದೆ. ಮಧ್ಯಮವರ್ಗದ ಬಹುತೇಕ ಕುಟುಂಬಗಳಲ್ಲಿ ಸೆಕ್ಷುಯಲ್ ಕಂಟೆಂಟ್ ಹಾಗಿರಲಿ, ನಮ್ಮ ದೇಹದಲ್ಲಿ ಆಗುವ ಬದಲಾವಣೆಗಳ ಕುರಿತೇ ಮುಕ್ತವಾಗಿ ಚರ್ಚೆ ಮಾಡುವುದಿಲ್ಲ. ಇಂತಹ ಕುಟುಂಬದ ಮಕ್ಕಳು ಚೆನ್ನಾಗಿ ಓದಿ, ವಿದೇಶಕ್ಕೆ ಹೋಗಿ ಬರುತ್ತಾರೆ. ಅಲ್ಲಿ ಅವರಿಗೆ ಬೇರೆಯದೇ ಜಗತ್ತು ತೆರೆದುಕೊಳ್ಳುತ್ತದೆ. ಅದಕ್ಕೆ ಪೂರಕವಾದ ಮನರಂಜನೆಯನ್ನು ಸ್ಟ್ಯಾಂಡ್‌ಅಪ್ ಕಾಮಿಡಿಗಳು ನಮ್ಮ ದೇಶದಲ್ಲಿ ಒದಗಿಸುತ್ತಿರುವುದು ಸ್ಪಷ್ಟ.

ಸ್ಟ್ಯಾಂಡ್‌ಅಪ್ ಕಾಮಿಡಿಗಳ ಪ್ರೇಕ್ಷಕರು ಸುಶಿಕ್ಷಿತರು. ಅವರು ಸಿನಿಮಾದ ಚರ್ವಿತ ಚರ್ವಣ ರಂಜನೆಯಿಂದ ಬೇಸತ್ತಿದ್ದಾರೆ. ಹೊಸತೇ ಆದ 'ಫ್ಯಾಂಟಸಿ' ಇಂತಹ ಸ್ಟ್ಯಾಂಡ್‌ಅಪ್ ಕಾಮಿಡಿಗಳಲ್ಲಿ ಸಿಗುತ್ತದೆ. ಆಡಳಿತಯಂತ್ರಕ್ಕೆ ವ್ಯಂಗ್ಯದ ಸೂಜಿಮೊನೆ ತಾಕಿಸುವ, ರೇಸಿಸಂ, ಸೆಕ್ಸಿಸಂ ಕುರಿತು ಮುಕ್ತವಾಗಿ ಮಾತನಾಡುವ, ದಪ್ಪಗಿರುವ ಅಥವಾ ಸಣ್ಣಗಿರುವ ವ್ಯಕ್ತಿ ತನ್ನ ದೌರ್ಬಲ್ಯಗಳನ್ನು ತಾನೇ ಹೇಳಿಕೊಳ್ಳುವ... ಇಂಥದ್ದನ್ನೆಲ್ಲ ಸ್ಟ್ಯಾಂಡ್‌ಅಪ್ ಕಾಮಿಡಿಯನ್‌ಗಳು ಮಾಡುತ್ತಾರೆ. ಇಂತಹ ಸರಕನ್ನು ಸ್ವೀಕರಿಸುವವ ಮನಸ್ಥಿತಿಯೂ ಭಿನ್ನವಾದದ್ದು. ಅವರಿಗೆ ಮನರಂಜನೆಯ ಬೇರೆಯದೇ ಬಗೆ ಬೇಕಾಗುತ್ತದೆ. ಹೀಗಿರುವಾಗ ನಮಗೆ ಅಶ್ಲೀಲವಾಗಿ ಕೇಳುವ ಭಾಷೆ ಅವರಿಗೆ ಸಹಜವಾಗಿರಲಿಕ್ಕೆ ಸಾಕು. ವಿದೇಶದಲ್ಲಿ ಕಿವಿಮೇಲೆ ಸದಾ ಬೀಳುತ್ತಿರುವ ನುಡಿಗಟ್ಟುಗಳಾಗಿ ಅವರಿಗೆ ಅದು ಸಂಸ್ಕೃತಿಯ ಭಾಗವೇ ಆಗಿರಬಹುದು.

ಸ್ಟ್ಯಾಂಡ್‌ಅಪ್ ಕಾಮಿಡಿ ಮಾಡುವವರು ಸದಾ 'ಇಂಪ್ರಾಂಪ್ಟು' (ಆಶುಪ್ರತಿಭೆ) ಆಗಿರಬೇಕಾಗುತ್ತದೆ. ನಿಂತಲ್ಲೇ ಸಮಯಸ್ಫೂರ್ತಿಯಿಂದ ಪ್ರಸಂಗಗಳನ್ನು ಪೋಣಿಸುವ ಕಲೆಯಿದು. ನಗಿಸಲಿಲ್ಲ ಎಂದರೆ ಸ್ಟ್ಯಾಂಡ್‌ಅಪ್ ಕಾಮಿಡಿ ನಡೆಯುವುದಿಲ್ಲ. ಹತ್ತು ನಿಮಿಷದಲ್ಲಿ ಬೆರಗುಗೊಳಿಸುವ, ಕಚಗುಳಿ ಇಡುವ, ಬೇರೆಯದೇ ಆಲೋಚನೆಗೆ ಹಚ್ಚುವ, ನಾವಿರುವ ಜಗತ್ತಿನಿಂದ ಒಂದಿನಿತಾದರೂ ಆಚೆಗೆ ತರುವ ಕ್ರಿಯೆ ಇದು. ಸೆಕ್ಷುಯಲ್ ಕಂಟೆಂಟ್ ಅಥವಾ ಸಮಾಜದಲ್ಲಿ ಸಹಜವಾಗಿ ನಡೆಯದ ಯಾವುದೋ ವಿಷಯವನ್ನು ಈ ಉದ್ದೇಶಕ್ಕಾಗಿ ಹೇಳಲೇಬೇಕಾಗುತ್ತದೆ. ಕೇಳುಗರಿಗೆ, ನೋಡುಗರಿಗೆ ಇದು ತಾತ್ಕಾಲಿಕ ಫ್ಯಾಂಟಸಿಯೇ ಹೌದು. 'ಡರ್ಟಿ